# ನಾಮಜಪವನ್ನು ಏಕೆ ಮತ್ತು ಯಾವುದು ಮಾಡಬೇಕು ?

## ಮನೋಗತ

ಸಾಮಾನ್ಯವಾಗಿ ಮಾನವನ ಜೀವನದಲ್ಲಿ ಸುಖಕ್ಕಿಂತ ದುಃಖದ ಪ್ರಮಾಣವೇ ಹೆಚ್ಚಿರುತ್ತದೆ. ದುಃಖವನ್ನು ಸಹಿಸುವ ಶಕ್ತಿಯು ಭಗವಂತನ ನಾಮಜಪದಿಂದ ಸಿಗುತ್ತದೆ. ಭಗವಂತನು 'ಸತ್-ಚಿತ್-ಆನಂದ' ಸ್ವರೂಪನಾಗಿರುವುದರಿಂದ ಅವನ ನಾಮಜಪವನ್ನು ಸತತವಾಗಿ ಮಾಡಿದರೆ ಜೀವನವು ಆನಂದಮಯವಾಗುತ್ತದೆ.

ಕಾಲಮಹಾತ್ಮೆಗನುಸಾರ ಈಗಿನ ಸೂಕ್ಷ್ಮದಲ್ಲಿನ ಆಪತ್ಕಾಲದಲ್ಲಿ ಕೆಟ್ಟ ಶಕ್ತಿಗಳ ತೊಂದರೆಯ ಪ್ರಮಾಣವು ತುಂಬಾ ಹೆಚ್ಚಾಗಿದೆ. ಸರಿಸುಮಾರು ಪ್ರತಿಯೊಬ್ಬ ವ್ಯಕ್ತಿಗೂ ಹೆಚ್ಚುಕಡಿಮೆ ಪ್ರಮಾಣದಲ್ಲಿ ಕೆಟ್ಟ ಶಕ್ತಿಗಳ ತೊಂದರೆಯಾಗುತ್ತಿದೆ. ಈ ತೊಂದರೆಯಿಂದಾಗಿ ಮನುಷ್ಯನ ಜೀವನವು ಸಮಸ್ಯೆಮಯ ಮತ್ತು ದುಃಖಿಯೂ ಆಗಿದೆ, ಹಾಗೆಯೇ ಅವನ ಸಾಧನೆಯೂ ಸರಿಯಾಗಿ ಆಗುವುದಿಲ್ಲ. ಇದಕ್ಕಾಗಿ ಕೆಟ್ಟ ಶಕ್ತಿಗಳ ತೊಂದರೆಗಳ ನಿವಾರಣೆಗಾಗಿ ಪ್ರಾಧಾನ್ಯತೆಯಿಂದ ನಾಮಜಪವನ್ನು ಮಾಡುವುದು ಆವಶ್ಯಕವಾಗಿದೆ. ಇದನ್ನು ಮಾಡಿ ಆಧ್ಯಾತ್ಮಿಕ ಉನ್ನತಿಗಾಗಿ ಯಾವ ನಾಮಜಪವನ್ನು ಮಾಡಬೇಕು ಎಂಬುದನ್ನೂ ಈ ಗ್ರಂಥದಲ್ಲಿ ಕೊಡಲಾಗಿದೆ.

ಸಾಧಕನ ಸಾಧನೆಯ ವರ್ಷಗಳು, ಅವನಲ್ಲಿ ಸಾಧಕತ್ವ ನಿರ್ಮಾಣವಾಗಿದೆಯೋ ಅಥವಾ ಇಲ್ಲವೋ ಮತ್ತು ಅವನು ಸಮಷ್ಟಿ ಸಾಧನೆ (ಉದಾ. ಅಧ್ಯಾತ್ಮಪ್ರಸಾರದ ಸೇವೆ)ಯನ್ನು ಮಾಡುತ್ತಾನೆಯೋ ಅಥವಾ ಇಲ್ಲವೋ, ಈ ಘಟಕಗಳಿಗನು ಸಾರ ಸಾಧಕನ ಸಾಧನೆಯ ಆಯಾಯ ಹಂತಗಳಿಗನುಸಾರ ಅವನು ಯಾವ ನಾಮಜಪ ಮಾಡಬೇಕು ಎಂಬುದನ್ನೂ ಸಹ ಈ ಗ್ರಂಥದಲ್ಲಿ ಕೊಡಲಾಗಿದೆ. ನಾಮಜಪದೊಂದಿಗೆ ಮುದ್ರೆ ಮತ್ತು ನ್ಯಾಸ ಮಾಡುವುದು, ಹಾಗೆಯೇ ಸ್ವಭಾವ ದೋಷಮತ್ತು ಅಹಂನ ನಿರ್ಮೂಲನೆಗಾಗಿ 'ಸ್ವಯಂಸೂಚನೆ'ಗಳನ್ನು ಕೊಡುವುದು ಹೇಗೆ ಲಾಭದಾಯಕವಾಗಿದೆ ಎಂಬುದರ ಹಿಂದಿನ ಶಾಸ್ತ್ರವನ್ನೂ ಈ ಗ್ರಂಥದಲ್ಲಿ ಸ್ಪಷ್ಟಪಡಿಸಲಾಗಿದೆ.

'ಈ ಕಿರುಗ್ರಂಥದಲ್ಲಿ ಕೊಟ್ಟಂತೆ ನಾಮಜಪ ಮಾಡಿ ಎಲ್ಲರೂ ಶೀಘ್ರಗತಿಯಲ್ಲಿ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಲಿ', ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

– ಸಂಕಲನಕಾರರು

**ಓದಿ : ಸನಾತನದ ಕಿರುಗ್ರಂಥ 'ಗಣಪತಿ'**

## ಅನುಕ್ರಮಣಿಕೆ


卐 'ಕೆಟ್ಟ ಶಕ್ತಿಗಳಿಂದ ಸಾಧಕರಿಗೆ ಆಗುವ ತೊಂದರೆ' ಎಂಬ ಸಂಜ್ಞೆಯ ಅರ್ಥ ೬

卐 ಮನೋಗತ ೭

೧. 'ನಾಮಸಂಕೀರ್ತನಾಯೋಗ'ದ ವ್ಯಾಖ್ಯೆ ೯

೨. ಜಪ ೯

೩. ನಾಮದ ಮಹತ್ವ ೧೦

೪. ಕೆಟ್ಟ ಶಕ್ತಿಗಳಿಂದಾಗುವ ತೊಂದರೆಗಳ ನಿವಾರಣೆ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಯಾವ ನಾಮಜಪ ಮತ್ತು ಉಪಾಯಗಳನ್ನು ಮಾಡಬೇಕು ? ೧೧

* ಕೆಟ್ಟ ಶಕ್ತಿಗಳ ತೊಂದರೆಗಳನ್ನು ದೂರಗೊಳಿಸುವುದರ ಆವಶ್ಯಕತೆ ೧೧

* ಸಾಂಪ್ರದಾಯಿಕ ನಾಮಜಪದ ಮಿತಿ ೬೩

೫. ನಾಮಜಪ ಮಾಡುವುದರ ಬಗೆಗಿನ ಕೆಲವು ವ್ಯಾವಹಾರಿಕ ಸೂಚನೆಗಳು ೬೫